**O.S. No.616, PW:2.**

**ದಿನಾಂಕ 07.06.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : ಶ್ರೀ ಯು ಎಸ್ ವಕೀಲರಿಂದ**

ವಾದಿಯು ಬಿ.ಎಸ್.ಎನ್.ಎಲ್.ಇಲಾಖೆಯಲ್ಲಿ ಉದ್ಯೋಗದಲ್ಲಿ ಇದ್ದರು ಎಂದರೆ ಸರಿ. ಅವರು ಅಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡುತ್ತಿದ್ದರು. ಸುಮಾರು 35 ವರ್ಷಗಳಿಂದ ವಾದಿಯು ಬಿ.ಎಸ್.ಎನ್.ಎಲ್.ಇಲಾಖೆಯಲ್ಲಿ ದಿನಗೂಲಿ ನೌಕರನಾಗಿ ಕೆಲಸ ನಿರ್ವಹಿಸುತ್ತಿದ್ದರು. ಈ ಕೆಲಸದ

ಬಾಬ್ತು ವಾದಿಯು ಸುತ್ತ-ಮುತ್ತ ಊರುಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ವಾದಿಯು ಬೆಳಗ್ಗಿನಿಂದ ಸಂಜೆಯ ತನಕ ಸದರಿ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ವಾದಿಯು ಯಾವ ಸಮಯದಲ್ಲಿ ಕೆಲಸ ಹೇಳುತ್ತಿದ್ದರೋ ಆ ಸಮಯದಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದರು ಎಂದು ನುಡಿಯುತ್ತಾರೆ.

ವಾದಿಗೆ ದಾವಾ ಆಸ್ತಿಯು 1981 ರಲ್ಲಿ ಮಂಜೂರಾಗಿರುತ್ತದೆ. ಮಂಜೂರಾದಾಗ ದಾವಾ ಆಸ್ತಿಯನ್ನು 1981 ರಲ್ಲಿ ಅಳತೆ ಮಾಡಿರುತ್ತಾರೆಯೇ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯ ಸರ್ವೆ ನಂಬರಿನಲ್ಲಿ ಒಟ್ಟು 30 ರಿಂದ 40 ಎಕರೆ ಜಮೀನು ಇರಬಹುದು. ಆ ಪೈಕಿ ಯಾರು ಯಾರು ಎಷ್ಟು-ಎಷ್ಟು ಎಕರೆ ಜಮೀನಿನ ಸ್ವಾಧೀನದಲ್ಲಿ ಇದ್ದಾರೆ ಎಂದು ಈಗ ಹೇಳಲಾಗುವುದಿಲ್ಲ. ವಾದಿಯು ನನ್ನ ಸಂಬಂಧಿಕರಲ್ಲ. ವಾದಿಯು ಯಾವುದೇ ಸ್ವತ್ತಿನ ಸ್ವಾಧೀನದಲ್ಲಿ ಇರುವುದಿಲ್ಲವೆಂದರೆ ಸರಿಯಲ್ಲ. ದಾವಾ ಸ್ವತ್ತಿನ ದಕ್ಷಿಣಕ್ಕೆ ಲೋಕೇಶಪ್ಪ ರವರ ಜಮೀನು ಇದೆ, ಪೂರ್ವಕ್ಕೆ ನರಸಿಂಹಪ್ಪ ರವರ ಜಮೀನು, ಉತ್ತರಕ್ಕೆ ಓಂಕಾರಪ್ಪ ಮತ್ತು ಕರಿಯಪ್ಪ ರವರ ಜಮೀನು ಮತ್ತು ಪಶ್ಚಿಮಕ್ಕೆ ಸರ್ಕಾರದ ಜಮೀನು ಬರುತ್ತದೆ. ಸಾಗುವಳಿ ಆಗುವಾಗ ಚಕ್ಕುಬಂಧಿ ಕೊಟ್ಟಿರುತ್ತಾರೆ ಎಂದರೆ ಸರಿ. ನಾನು ಹೇಳಿದ ಚಕ್ಕುಬಂಧಿಯಲ್ಲಿ ವಾದಿಯು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಆ ಕಾರಣ ಪ್ರತಿವಾದಿಯವರು ಅವರ ಸ್ವಾಧೀನವನ್ನು ಅಡ್ಡಿಪಡಿಸುವ ಪ್ರಶ್ನೆಯೆ ಬರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಸ್ವಾಧೀನಕ್ಕೆ ಪ್ರತಿವಾದಿಯರು ತೊಂದರೆ ನೀಡುತ್ತಿದ್ದಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಯಾವ ದಿನಾಂಕ ಅಥವಾ ವರ್ಷದಲ್ಲಿ ತೊಂದರೆ ನೀಡಿರುತ್ತಾರೆ ಎಂದು ತಿಳಿಸಿರುವುದಿಲ್ಲ. ವಾದಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಹಿ/-

3 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಕಡೂರು